# ಗೂಗಲ್‌ನಲ್ಲಿ ಭೂಕಂಪನ ಎಚ್ಚರಿಕೆ

**ವಿದೇಶಗಳಲ್ಲಿ ಲಭ್ಯವಿದ್ದ 'ಗೂಗಲ್ ಭೂಕಂಪನ ಎಚ್ಚರಿಕೆ' ಫೀಚರ್ ಈಗ ಭಾರತದಲ್ಲೂ ಲಭ್ಯ.**

■ ಶಶಿಕುಮಾರ್ ಸಿ.

ಸಾವು ನೋವಿನ ಪ್ರತಿರೂಪವಾದ ತೀವ್ರ ಭೂಕಂಪಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಆದರೆ, ಭೂಕಂಪದ ಬಗ್ಗೆ ಮುನ್ಸೂಚನೆ ನೀಡಿ ಸಂಭವಿಸುವ ಸಾವು–ನೋವನ್ನು ಸಾಧ್ಯವಾದಷ್ಟರ ಮಟ್ಟಿಗೆ ತಡೆಯಬಹುದೆಂಬ ದೂರದೃಷ್ಟಿಯಿಂದ 2020ರಲ್ಲಿ ರೂಪುಗೊಂಡ 'ಆ್ಯಂಡ್ರಾಯ್ಡ್ ಅರ್ಥ್‌ಕ್ವೇಕ್ ಅಲರ್ಟ್ ಸಿಸ್ಟಂ' (ಭೂಕಂಪನದ ಬಗ್ಗೆ ಎಚ್ಚರಿಕೆ ನೀಡುವ ವ್ಯವಸ್ಥೆ) ಅನ್ನು ಗೂಗಲ್ ಈಗ ಭಾರತದಲ್ಲಿ ಪರಿಚಯಿಸಿದೆ.

ಕೇಂದ್ರ ಭೂ ವಿಜ್ಞಾನ ಸಚಿವಾಲಯ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ (NDMA) ಮತ್ತು ಭೂಕಂಪನಶಾಸ್ತ್ರದ ರಾಷ್ಟ್ರೀಯ ಕೇಂದ್ರಗಳ (NCS) ಜೊತೆಗೂಡಿ ಈ ಫೀಚರ್ ಅನ್ನು ಗೂಗಲ್ ಪರಿಚಯಿಸಿದೆ. ನಿರ್ದಿಷ್ಟ ಭೂಪ್ರದೇಶವೊಂದರಲ್ಲಿ ಭೂಕಂಪನ ಸಂಭವಿಸುವ ಸಾಧ್ಯತೆ ಇದ್ದಾಗ, ಆ ಪ್ರದೇಶದಲ್ಲಿನ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಆ ಬಗ್ಗೆ ಎಚ್ಚರಿಕೆ ಸಂದೇಶವು ರವಾನೆಯಾಗುತ್ತದೆ. ಇದರಿಂದ, ಎದುರಾಗುವ ಅಪಾಯದ ಬಗ್ಗೆ ಎಚ್ಚರಗೊಳ್ಳಬಹುದು ಎಂಬುದು ಗೂಗಲ್ ವಾದ.




ಚಿತ್ರ: ಗೂಗಲ್ ಕೃಪೆ

### ಕಂಪನ ಗುರುತಿಸುವಿಕೆ ಹೇಗೆ?

ಆ್ಯಂಡ್ರಾಯ್ಡ್ ಭೂಕಂಪನ ಎಚ್ಚರಿಕೆ ವ್ಯವಸ್ಥೆಯು, ಕಂಪನ ಗುರುತಿಸಲು ಅಕ್ಸೆಲೆರೊಮೀಟರ್ ಎಂದು ಕರೆಯಲಾಗುವ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳಲ್ಲಿನ ಅಂತರ್ನಿರ್ಮಿತ ಸಂವೇದಕಗಳನ್ನು ಬಳಸಿಕೊಳ್ಳುತ್ತದೆ. ಅಕ್ಸೆಲೆರೊಮೀಟರ್ ಮಿನಿಯೇಚರ್ ಸಿಸ್ಮೋಮೀಟರ್‌ಗಳಾಗಿ ಇಲ್ಲಿ ಕಾರ್ಯನಿರ್ವಹಿಸುತ್ತವೆ.

ಭೂಕಂಪನದ ಆರಂಭಿಕ ಗುಣಲಕ್ಷಣಗಳನ್ನು ಪತ್ತೆಹಚ್ಚುವ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳು ಆ ಡೇಟಾವನ್ನು ಸೆಂಟ್ರಲ್ ಸರ್ವರ್‌ಗೆ ಕಳುಹಿಸುತ್ತವೆ. ಒಂದೇ ಪ್ರದೇಶದಲ್ಲಿನ ಅನೇಕ ಫೋನ್‌ಗಳಲ್ಲಿ ಒಂದೇ ರೀತಿಯ ಕಂಪನ ಕಂಡುಬಂದರೆ ಅದನ್ನು ಭೂಕಂಪನದ ಗುಣಲಕ್ಷಣವೆಂದು ಈ ಫೀಚರ್ ಗುರುತಿಸುತ್ತದೆ. ಅಲ್ಲದೆ, ಆ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ಸನಿಹದ ಆ್ಯಂಡ್ರಾಯ್ಡ್ ಸಾಧನಗಳಿಗೆ ಸಂದೇಶ ಕಳಿಸುತ್ತದೆ. ಅಂತರ್ಜಾಲದ ಮೂಲಕ ಎಚ್ಚರಿಕೆಯನ್ನು ತನ್ನ ಬಳಕೆದಾರರಿಗೆ ತೀವ್ರ ವೇಗದಲ್ಲಿ ಈ ಫೀಚರ್ ತಲುಪಿಸುತ್ತದೆ.

ಭೂಕಂಪನದ ಬಗ್ಗೆ ಎಚ್ಚರಿಸುವ ವಿಧಾನವನ್ನು ಬಳಕೆದಾರಸ್ನೇಹಿಯಾಗಿ ರೂಪಿಸಲಾಗಿದ್ದು, ಆಯಾ ಪ್ರಾಂತ್ಯಕ್ಕನುಗುಣವಾಗಿ ಬೇರೆ ಬೇರೆ ಭಾಷೆಗಳಲ್ಲಿ ಎಚ್ಚರಿಕೆ ಸಂದೇಶ ತಲುಪುವಂತೆ ಸಿದ್ಧಗೊಳಿಸಲಾಗಿದೆ. ಆ್ಯಂಡ್ರಾಯ್ಡ್ 5 ಮತ್ತು ಅದಕ್ಕಿಂತ ಹೊಸದಾದ ಎಲ್ಲ ಆವೃತ್ತಿಯ ಸಾಧನಗಳಿಗೆ ಈ ಫೀಚರ್ ಲಭ್ಯವಿರಲಿದೆ. ಇನ್ನು ಮುಂದುವರೆದಂತೆ, ಬಳಕೆದಾರರು ತಮ್ಮ ಸುತ್ತಮುತ್ತಲಿನ ಭೂಕಂಪನದ ಬಗ್ಗೆ ತಿಳಿಯಲು ಗೂಗಲ್‌ನಲ್ಲಿ 'ಅರ್ಥ್‌ಕ್ವೇಕ್ ನಿಯರ್ ಮಿ' ಎಂದು ಸರ್ಚ್ ಮಾಡಿದರೆ ಸಾಕು. ತನ್ನಲ್ಲಿ ಲಭ್ಯವಿರುವ ಮಾಹಿತಿಯನ್ನು ಆಧರಿಸಿ ಬಳಕೆದಾರರು ಇರುವ ಸುತ್ತಮುತ್ತಲಿನ ಪ್ರದೇಶದಲ್ಲಿ ಸಂಭವಿಸಿದ ಭೂಕಂಪನದ ಮಾಹಿತಿಯನ್ನು ಗೂಗಲ್ ಒದಗಿಸುತ್ತದೆ.

### ಎರಡು ರೀತಿಯ ಎಚ್ಚರಿಕೆ

ಬೀ ಅವೇರ್ ಅಲರ್ಟ್: ಇದು ಜಾಗೃತರಾಗಿರಿ ಎಂಬ ಸೂಚನೆ. ಸಣ್ಣ ಪ್ರಮಾಣದ ಭೂಕಂಪನ ಸಂಭವಿಸಿದರೂ ಎಚ್ಚರಿಕೆಯನ್ನು ನೀಡುವ ರೀತಿಯಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ. ಭೂಕಂಪನದ ಬಗ್ಗೆ ಇದು ನೋಟಿಫಿಕೇಷನ್ ತಲುಪಿಸುತ್ತದೆ. ಅದನ್ನು ನೀವು ಟ್ಯಾಪ್ ಮಾಡಿದಾಗ ಹೆಚ್ಚಿನ ಮಾಹಿತಿ ತೆರೆದುಕೊಳ್ಳುತ್ತದೆ.

ಟೇಕ್ ಆ್ಯಕ್ಷನ್ ಅಲರ್ಟ್: ಭೂಕಂಪನದ ಮುನ್ಸೂಚನೆ ಸಿಕ್ಕಾಗ ಬಳಕೆದಾರರು ಏನು ಮಾಡಬೇಕು, ಏನು ಮಾಡಬಾರದು ಎಂಬುದರ ಪಟ್ಟಿಯನ್ನು ಇದು ಒಳಗೊಂಡಿರುತ್ತದೆ. ಕಂಪನ ಶುರುವಾಗುವ ಮುನ್ನವೇ ಬಳಕೆದಾರರ ಗಮನ ಸೆಳೆಯುವ ರೀತಿಯಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ. ಇದರಿಂದ ಜನರನ್ನು ರಕ್ಷಿಸಲು ಮತ್ತು ಜನರಿಗೆ ಸ್ವತಃ ರಕ್ಷಿಸಿಕೊಳ್ಳಲು ಸಮಯ ಸಿಗುತ್ತದೆ. 'ಡು ನಾಟ್ ಡಿಸ್ಟರ್ಬ್' ಸೆಟ್ಟಿಂಗ್ ಅನ್ನು ಭೇದಿಸಿ ನಿಮ್ಮ ಸ್ಕ್ರೀನ್ ಆನ್ ಮಾಡಿ ಜೋರಾದ ಧ್ವನಿಯನ್ನು ಹೊರಡಿಸುವ ರೀತಿಯಲ್ಲಿ ಇದನ್ನು ವಿನ್ಯಾಸಗೊಳಿಸಲಾಗಿದೆ. ಆತಂಕದಲ್ಲಿದ್ದಾಗ ಬಳಕೆದಾರರು ಏನು ಮಾಡಬೇಕು, ಏನು ಮಾಡಬಾರದು ಎಂಬುದನ್ನು ಇದು ತಿಳಿಸುತ್ತದೆ.

### ಫೀಚರ್ ಆಯ್ಕೆ ವಿಧಾನ

- ಲೊಕೇಷನ್ ಸರ್ವೀಸಸ್ ಆಯ್ಕೆಯನ್ನು ಆನ್ ಮಾಡಬೇಕು. (ನೀವಿರುವ ಸ್ಥಳವನ್ನು ಗುರುತಿಸಲು ಈ ಆಯ್ಕೆ ಗೂಗಲ್‌ಗೆ ನೆರವಾಗುತ್ತದೆ.)
- ಸ್ಮಾರ್ಟ್‌ಫೋನ್‌ನ ಸೆಟ್ಟಿಂಗ್ಸ್ ಆಯ್ಕೆ ಕ್ಲಿಕ್ಕಿಸಿ.
- ಸೆಟ್ಟಿಂಗ್ಸ್ ವಿಭಾಗದಲ್ಲಿನ 'ಸೇಫ್ಟಿ ಅಂಡ್ ಎಮರ್ಜೆನ್ಸಿ' ಆಯ್ಕೆಯನ್ನು ಒತ್ತಿ.
- ಅಲ್ಲಿ ಕಾಣುವ 'ಅರ್ಥ್‌ಕ್ವೇಕ್ ಅಲರ್ಟ್' ಕ್ಲಿಕ್ಕಿಸಿ, ಆ ಆಯ್ಕೆಯನ್ನು ಆನ್ ಮಾಡಿ.
- ಈ ಆಯ್ಕೆ ಚಾಲ್ತಿಗೊಳ್ಳಲು ವೈ–ಫೈ ಅಥವಾ ಇಂಟರ್‌ನೆಟ್ ಆನ್ ಆಗಿರುವಂತೆ ನೋಡಿಕೊಳ್ಳಿ.

ಹೀಗೂ ಮಾಡಿ:

- ಸೆಟ್ಟಿಂಗ್ಸ್‌ಗೆ ಹೋಗಿ ಲೊಕೇಷನ್ ಕ್ಲಿಕ್ಕಿಸಿ.
- ನಂತರ ಆ ವಿಭಾಗದಲ್ಲಿ ಕಾಣುವ ಅಡ್ವಾನ್ಸ್ಡ್ ಆಯ್ಕೆ ಒತ್ತಿ.
- ಅರ್ಥ್‌ಕ್ವೇಕ್ ಅಲರ್ಟ್ ಆನ್ ಮಾಡಿ.

ಇಷ್ಟು ಮಾಡಿದರೆ ನಿಮ್ಮ ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ನಲ್ಲಿ ಭೂಕಂಪನ ಎಚ್ಚರಿಕೆಯ ವ್ಯವಸ್ಥೆ ಸಕ್ರಿಯಗೊಳ್ಳುತ್ತದೆ. ಬಳಿಕ ಭೂಕಂಪನಕ್ಕೆ ಸಂಬಂಧಿಸಿದ ಅಪ್‌ಡೇಟ್‌ಗಳನ್ನು ನಿಮ್ಮ ಮೊಬೈಲ್‌ನಲ್ಲಿ ಆಗಾಗ ಪಡೆಯುತ್ತಲೇ ಇರುತ್ತೀರಿ. ■